ಇರಬಹುದು, ಸಾಬರಮತಿ ಆಶ್ರಮ ಇರಬಹುದು – ಅಲ್ಲೆಲ್ಲ ಅವರೇ ಖುದ್ದಾಗಿ ಈ ಕೆಲಸ ಮಾಡ್ತಾ ಇದ್ದರು. ಈ ವಿಷಯದಲ್ಲಿ ಬ್ರಿಟಿಷರನ್ನೂ ತರಾಟೆಗೆ ತಗೋತಾ ಇದ್ರು, ನಮ್ಮ ಜನನಾಯಕರನ್ನೂ...

**(ಹಿನ್ನೆಲೆಯಲ್ಲಿ ಗಾರ್ಡ್‌ಗಳ ಬೂಟುಗಾಲಿನ ಸದ್ದು, ಶೀಟಿ ಸದ್ದು, ಎಂಜಿನ್ ಸದ್ದು, ಭದ್ರತಾ ಪಡೆಯವರ ಲಾಠಿ ಸದ್ದು)**

**ಮಗು:** (ಜೋರಾಗಿ ನಕ್ಕು) ಅಂದರೆ ಬ್ರಿಟಿಷರೂ ಗಲೀಜು ಜನ ಆಗಿದ್ರಾ?

**ಅವಳು:** ಬ್ರಿಟಿಷರು ಕ್ಲೀನಾಗೇ ಇರುತ್ತಿದ್ದರು. ದಿಲ್ಲಿಯಲ್ಲಿ ದೊಡ್ಡ ದೊಡ್ಡ ಬಿಳಿ ಅಧಿಕಾರಿಗಳ ಸುತ್ತ ಭದ್ರತಾ ಪಡೆಯವರು, ಅವರ ಭವ್ಯ ಬಂಗ್ಲೆಗಳನ್ನು ಚೊಕ್ಕಟ ಇಡೋಕಂತ್ಲೇ ಭಾರತೀಯ ಪೇದೆಗಳು, ಆಳುಕಾಳುಗಳು ಇದ್ರಲ್ಲ... ಅವರ ವಾಸದ ಕೋಣೆಗಳು ತುಂಬಾ ಗಲೀಜಾಗಿ ಇರುತ್ತಿದ್ದು. ಗಾಂಧೀಜಿ ಅದನ್ನೆಲ್ಲ ಗಮನಿಸಿದ್ರು. 1946ರಲ್ಲಿ ವೈಸ್‌ರಾಯ್ ಬಂಗ್ಲೆಯಿಂದ ಹೊರಕ್ಕೆ ಬಂದು ಸಾರ್ವಜನಿಕ ಸಭೆಯಲ್ಲಿ ಅದರ ಬಗ್ಗೆ ಖಾರವಾಗಿ ಹೇಳಿದರು. ‘ಕೆಲಸಗಾರರ ಮನೆಗಳೂ ಚೊಕ್ಕಟ ಇರಬೇಕು. ಐಷಾರಾಮಿ ಇರಬೇಕು ಅಂತ ಅಲ್ಲ, ಆದರೆ ಚೊಕ್ಕಟ ಇರಬೇಕು. ನಾಳೆ ನಮ್ಮ ಮಂತ್ರಿಗಳಾಗುವವರು ತಮ್ಮ ನಿವಾಸಗಳ ಹಾಗೇ ತಮ್ಮ ಕೆಲಸಗಾರರ ಮನೆಗಳೂ ಕ್ಲೀನಾಗಿ ಇರುವಂತೆ ನೋಡಿಕೊಳ್ಳಬೇಕು’ ಎಂದಿದ್ದರು. 1947ರಲ್ಲಿ, ದೇಶಕ್ಕೆ ಸ್ವಾತಂತ್ರ್ಯ ಇನ್ನೇನು ಸಿಕ್ಕೇಬಿಡ್ತು ಅನ್ನುವಾಗ ಅವರು ಏನು ಹೇಳಿದ್ರು ಗೊತ್ತೆ?

**ಅವಳು:** ಏನಂದ್ರೂ?

**ಅವನು: sanitation is more important than political independence ಅಂದುಬಿಟ್ರು!**

**ಅವಳು:** ಒಳ್ಳೇ ಯುವಕನ ಘೋಷಣೆ ಇದ್ದಂಗೆ ಇದೆಯಲ್ಲ! ಆ ಮಾತು ಹೇಳುವಾಗ ಬಾಪೂಜಿಗೆ ವಯಸ್ಸಾಗಿತ್ತು ರೀ. ದೈಹಿಕವಾಗಿ ತೀರ ದುರ್ಬಲ ಆಗಿದ್ರು... ಅವರ ಮಾತಿನಲ್ಲೇ ಹೇಳಿ ನೋಡೋಣ...?

**ಅವನು:** (ಈಗ ಅನುಕರಣೆಯ, ಕ್ಷೀಣ ಧ್ವನಿಯಲ್ಲಿ) **sanitation is more important than political independence** ಅಂದುಬಿಟ್ರು!

**ಮಗು:** ಅಂದ್ರೆ?

**ಅವನು:** ಅಂದರೆ... ‘ದೇಶದ ರಾಜಕೀಯ ಸ್ವಾತಂತ್ರ್ಯಕ್ಕಿಂತ ಕಕ್ಕಸು ಕ್ಲೀನ್ ಇಟ್ಕೊಳ್ಳೋದ್ ಮುಖ್ಯ’ ಅಂದ್ರು.

**ಅವಳು:** ಅಲ್ವೆ ಮತ್ತೆ! ಈಗ ನೋಡಿ... ಸ್ವಾತಂತ್ರ್ಯ ಸಿಕ್ತು ಅಂತ ಕಂಡಕಂಡಲ್ಲಿ ರಸ್ತೆ ಬದೀಲಿ, ಕಸ ಎಸಿಯೋದು, ಕಕ್ಕಸು ಮಾಡೋದೇ ಸ್ವಾತಂತ್ರ್ಯ ಅಂತ ಅಂದ್ಕೋತಾರೆ ಎಷ್ಟೋ ಜನ. ನಾಚಿಕೆ ವಿಷಯ ಏನಂದ್ರೆ ಸ್ವಾತಂತ್ರ್ಯ ಸಿಕ್ಕ 70 ವರ್ಷಗಳ ಅನಂತರ ‘ಸ್ವಚ್ಛ ಭಾರತ’ ಆಂದೋಲನಕ್ಕೆ ಹೊಸದಾಗಿ ಚಾಲನೆ